

ಮಾರ್ಗ ಇಲ್ಲಿಂದ ನಲವತ್ತೈದು ಕಿಲೋಮೀಟರ್ ದೂರದಲ್ಲಿರುವ ಬಾಬಾಬುಡನ್ ಗಿರಿ ಹತ್ತಿರದ ಮುಳ್ಳಯ್ಯನಗಿರಿ ಪಕ್ಕದ ಹಿರೇಕಾನು ಮಠದಲ್ಲಿ ಅಂತ್ಯವಾಗುತ್ತದೆ.

### ಜೀವವೈವಿಧ್ಯ ತಾಣ

ಒಂದು ಕಾಲದಲ್ಲಿ ಭಾರೀ ಸಂಖ್ಯೆಯ ಹುಲಿ, ಚಿರತೆ, ತೋಳ, ಕತ್ತೆಕಿರುಬ, ನರಿ, ಬರ್ಕ, ಕಾಡುಬೆಕ್ಕು, ಮೊಲ, ನವಿಲು, ಜಿಂಕೆ, ಕಡ, ಉಡ, ಕಾಡುಹಂದಿ, ವಿವಿಧ ಜಾತಿಯ ಮಂಗಗಳು, ಹಾವುಗಳು, ಕರಡಿಗಳ ಸಂತತಿ ಹೊಂದಿದ್ದ ಪ್ರದೇಶವಾಗಿತ್ತು. ಈಗ ಪ್ರಾಣಿಗಳ ಸಂಖ್ಯೆ ಕ್ಷೀಣಿಸಿದೆ. ವಿವಿಧ ಜಾತಿಯ ಪಕ್ಷಿಗಳನ್ನು ಇಲ್ಲಿ ಕಾಣಬಹುದು.

ಜಗತ್ತಿನ ಯಾವುದೇ ಭಾಗದಲ್ಲಿ ನೀರಿಗೆ ಬರಗಾಲ ಬಂದರೂ ಇಲ್ಲಿ ಬರಗಾಲವಿಲ್ಲ! ಅನಾದಿ ಕಾಲದಿಂದಲೂ ಇಲ್ಲಿ ಹರಿಯುತ್ತಿರುವ ಉದ್ಭವಗಂಗೆ ಅಥವಾ ಗುಡಾಣ ಗಂಗೆ ಇಂದಿಗೂ ಜೀವಜಲ ಹರಿಸುವುದನ್ನು ನಿಲ್ಲಿಸಿಲ್ಲ. ಈ ಊರಿನ ಹೊಂಡದಲ್ಲಿ ನೀರು, ಅನಾದಿ ಕಾಲದಲ್ಲಿ ಎಷ್ಟು ಇತ್ತೋ ಅಷ್ಟೇ ಇದೆ. ಸುತ್ತಲೂ ಬೆಟ್ಟಗುಡ್ಡಗಳ ನಡುವೆ ಚಿಕ್ಕ ಸರೋವರದಂತೆ ಇರುವ ಹೊಂಡ ಒಂದು ದೃಶ್ಯಕಾವ್ಯದಂತೆ. ಔಷಧೀಯ ಗುಣಗಳಿರುವ ಇಲ್ಲಿನ ಮರಗಿಡಗಳಿಂದ ಈ ಊರಿನ ನೀರೂ ಒಂದು ಔಷಧವೇ ಸರಿ. ಈ ನೀರನ್ನು ಬಳಸುವ ಸ್ಥಳೀಯರು ಅನೇಕ ಕಾಯಿಲೆಗಳಿಂದ ಮುಕ್ತವಾಗಿದ್ದೂ ಇದೆ. ಈ ನೀರನ್ನ ಕುಡಿದರೆ ಮೂರರಿಂದ ನಾಲ್ಕು ಗಂಟೆಗಳ ಕಾಲ ಯಾವ ಆಹಾರವೂ ಬೇಡ!

ಎಂಥಹ ಬೇಸಿಗೆಯಲ್ಲೂ ಸದಾ ಪ್ರಶಾಂತವಾಗಿ, ತಂಪಾಗಿರುವ ಹೊಗರೇಕಾನು ಗಿರಿ ಪ್ರದೇಶದಲ್ಲಿ, ಹಲವಾರು ವಿಶಿಷ್ಟ ಸ್ಥಳಗಳಿವೆ. ಅರಳೀಮರದ ಕಟ್ಟೆ, ಗುಡ್ಡದಮೇಲಿನ ಹೊಗರೇಹಳ್ಳಿಯ ಹೊಲಪ್ರದೇಶಗಳು, ಕಲ್ಲು ಜರಲುಗಳ ಪ್ರದೇಶ, ದೊಡ್ಡಕಲ್ಲು, ಮುರಾಲು, ಮುಖತೊಳೆಯುವ ಕಟ್ಟೆ, ಧುಳ್‌ತದಗುಂಡಿ, ಹೀರಣ್ಣನ ಕೊಳ್ಳಾರ, ಮುಸಿಯನ ಕೊಳ್ಳಾರ, ಗೋಗಲ್ಲು, ಊರ ಅರಳೀಮರ, ಗಡಿಕಲ್ಲು, ಕಾಫೀ ಕಣಗಳು, ಗರಗದಕಟ್ಟೆ, ತೇರುಬೀದಿ, ತೇರುಮನೆ, ಪರೇವು ಮನೆ, ಬಾಳೆಹಿತ್ಲು, ವಗದಿ, ಹೊಂಡ, ಬಸವನಬಾಯಿ ಮತ್ತು ಟ್ಯಾಂಕ್, ಸ್ಕೂಲ್‌ಮನೆ, ಹಳೇ ಊರು ಕಟ್ಟಡಗಳು, ಗಂಗೇಸರ, ನೊದೆಡ್ಡು, ಹಿತ್ಲುಗಳು, ಹಳೆಕಾಡು, ಹೊಸಕಾಡು, ಚರ್ಮದೊಳೆ, ತೌಡನಗುಹೆ ಅಥವಾ ಪಾಲನ ಗುಹೆ, ಈಚಲುಅವರೇಗುಡ್ಡ, ದೊಡ್ಡಬಾಳ್ರು, ಚಿಕ್ಕಬಾಳ್ರು, ಆಶ್ರಮ, ಬಂಗಲಿ, ಹೊಸಮನೆ, ಪುರೋಹಿತರ ಮನೆಗಳು, ಬಿದ್ದುಹೋಗಿರುವ ಇತಿಹಾಸ ಸಾರುವ ಹಳೇ ಕಟ್ಟಡಗಳು, ಇನ್ನೂ ಹಲವಾರು ವೈವಿಧ್ಯಮಯ ತಾಣಗಳನ್ನು ಇಲ್ಲಿ ಕಾಣಬಹುದು.

ಐತಿಹಾಸಿಕ ಪ್ರಸಿದ್ಧ ಜೀವವೈವಿಧ್ಯಗಳ ತಾಣವಾದ ಹೊಗರೇಕಾನು ಗಿರಿಯ ಬಗ್ಗೆ ಸುಮಾರು ಐವತ್ತು ವರ್ಷಗಳ ಹಿಂದೆ ತುಮಕೂರು ಜಿಲ್ಲೆ, ತಿಪಟೂರು ತಾಲ್ಲೂಕು, ಹೊನ್ನವಳ್ಳಿಯ ಶ್ರೀ ಎಂ.ಹೆಚ್. ಹನುಮಂತಪ್ಪ ಬರೆದ ಲಾವಣಿಯಲ್ಲಿ ಬಳಕೆಯಾಗಿವೆ. ನರಭಕ್ಷಗಳ ತಜ್ಞ ಕೆನೆತ್ ಹ್ಯಾಂಡರ್‌ಸನ್ ಈ ಭಾಗದಲ್ಲಿ ಓಡಾಡಿದ್ದ ಅನುಭವಗಳನ್ನು ತಮ್ಮ ಕತೆಗಳಲ್ಲಿ ಈ ಸ್ಥಳವನ್ನು ಸೊಗಸಾಗಿ ಉಲ್ಲೇಖಿಸಿರುವುದು ಕಂಡುಬರುತ್ತದೆ. ಪ್ರತೀ ವರ್ಷ ಸಾವಿರಾರು ಜನರು ಇಲ್ಲಿ ಭೇಟಿ ಕೊಡುತ್ತಾರೆ. ಯುವಜನರಿಗೆ ಇದು ಮನೋಹರವಾದ ಚಾರಣ ಸ್ಥಳ.